**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS-161/2020** **DW-2**

**ದಿಃ 18.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಬಿ ಎಚ್ ವಕೀಲರಿಂದಃ**

ನನಗೆ ಬರೆದುಕೊಟ್ಟ ಕ್ರಯಪತ್ರದಲ್ಲಿ ನಮ್ಮನ್ನು ಹೊರತುಪಡಿಸಿ ಅಂದರೆ ಪ್ರತಿವಾದಿ 2 ರಿಂದ 4 ರವರನ್ನು ಹೊರತುಪಡಿಸಿ ಬೇರೆ ಯಾರದೂ ಸದರಿ ಆಸ್ತಿಯಲ್ಲಿ ಮಾಲೀಕತ್ವ ಇಲ್ಲ ಎಂಬುದಾಗಿ ಬರೆದಿಲ್ಲ ಎಂದರೆ ಸಾಕ್ಷಿ ಬರೆದಿಲ್ಲ ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ಸದರಿ ಆಸ್ತಿ ತಮಗೆ ಹೇಗೆ ಬಂದಿತ್ತು ಎಂಬುದನ್ನು ಬರೆದಿಲ್ಲ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಕ್ರಯಪತ್ರಕ್ಕಾಗಲಿ ಅಥವಾ ಕ್ರಯದ ಅಗ್ರಿಮೆಂಟಗಾಗಲಿ ನೀವೇನಾದರೂ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿ ನಾನು ಮಾಡಿಲ್ಲ ಎನ್ನುತ್ತಾರೆ. ಕೊಡುವವರ ಹಾಗೂ ತೆಗೆದುಕೊಳ್ಳುವವರ ನಡುವೆ ಏನು ಮಾತುಕತೆ ಆಗಿದೆ ಎಂಬ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಎಷ್ಟು ಹಣಕ್ಕೆ ತೆಗೆದುಕೊಂಡರು ಮತ್ತು ಸದರಿ ಆಸ್ತಿ ಆನಂದಪ್ಪ ಇವರ ಹೊಲ ಇದೆ ಎಂಬುದು ಮಾಹಿತಿ ಇದೆ ಎನ್ನುತ್ತಾರೆ. ಇದನ್ನು ಹೊರತುಪಡಿಸಿ ಬೇರೆ ಮಾಹಿತಿ ಗೊತ್ತಿಲ್ಲ ಎನ್ನುತ್ತಾರೆ. ಎಷ್ಟು ಮಂದಿ ಕಡೆ ಖರೀದಿಗೆ ತೆಗೆದುಕೊಂಡಿರುತ್ತಾರೆಂಬ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಮೂರು ಮಂದಿಯಿಂದ ಎನ್ನುತ್ತಾರೆ. ಬೀಮಪ್ಪ ಬಸಪ್ಪ ಪೂಜಾರ ಎಂಬುವವರ ಸಹಿ ನಿಡಿ 3 ರ ಪುಟ ಸಂಖ್ಯೆ 5 ರಲ್ಲಿ ಇಲ್ಲ ಎಂದರೆ ಸರಿ. ಬಸಪ್ಪನ ಹೆಣ್ಣು ಮಕ್ಕಳು ಹಾಗೂ ಆತನ ಹೆಂಡತಿ ಸಹಿಗಳನ್ನು ಒಪ್ಪಿಗೆದಾರರ ಸಹಿ ಎಂಬುದಾಗಿ ಸದರಿ ದಾಖಲೆಯಲ್ಲಿ ಎಲ್ಲಿಯೂ ಮಾಡಿಸಿಲ್ಲ ಎಂದರೆ ಸರಿ. ಪ್ರತಿವಾದಿ 6 ರವರ ಸಹಿ ಕೂಡಾ ನಿಡಿ 3 ರಲ್ಲಿ ಇಲ್ಲ. ದಾಖಲೆಯಾಗಿದೆ ಎಂದು ಹೇಳಲಾದ ಸಮಯದಲ್ಲಿ ಸದರಿ ಪ್ರತಿವಾದಿ 6 ರವರು ಕೂಡಾ ಜೀವಂತ ಇದ್ದರೆಂದರೆ ಸರಿ. ಸದರಿ ಆಸ್ತಿ ಖರೀದಿ ಮಾಡುವ ಮೊದಲು ದಾಖಲೆಗಳನ್ನು ನೋಡಿರುತ್ತೇವೆಂದು ಹೇಳಿದ್ದು ಆ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎನ್ನುತ್ತಾರೆ. ನಿಡಿ 3 ಕ್ಕೆ ಯಾರು ಸಹಿ ಮಾಡಿರುತ್ತಾರೆಂದರೆ ಸಾಕ್ಷಿ ನನ್ನ ಅಳಿಯ ಸಹಿ ಮಾಡಿರುತ್ತಾರೆ ಎನ್ನುತ್ತಾರೆ. ನನ್ನ ಅಳಿಯ ಮೊದಲು ಕೆ ಎಂ ಸಿ ಯಲ್ಲಿದ್ದರು ಈಗ ಯು ಕೆ ನಲ್ಲಿ ಇರುತ್ತಾರೆ ಎನ್ನುತ್ತಾರೆ. ನನ್ನ ಮಗಳಿಗೆ ಈ ವ್ಯವಹಾರದ ಬಗ್ಗೆ ಏನೂ ಗೊತ್ತಿಲ್ಲ ಎಂದರೆ ಸಾಕ್ಷಿ ಗೊತ್ತಿದೆ ಎನ್ನುತ್ತಾರೆ. ನನ್ನ ಮಗಳು ಯಾವದೇ ವ್ಯವಹಾರ ಮಾಡಿಲ್ಲ ಎಂದರೆ ಸಾಕ್ಷಿ ಮಾಡಿದ್ದಾಳೆ ಖರೀದಿ ಪತ್ರ ಆಗಿದೆ

ಎನ್ನುತ್ತಾರೆ. ನನ್ನ ಮಗಳು ನನಗೆ ಮಾಹಿತಿ ಕೊಟ್ಟ ಬಗ್ಗೆ ನಾನು ಸಾಕ್ಷ್ಯ ಹೇಳಲು ಬಂದಿರುತ್ತೇನೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಅಳಿಯ ಮತ್ತು ಮಗಳು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಿದರೆ ಸತ್ಯ ಸಂಗತಿ ಗೊತ್ತಾಗುತ್ತದೆಂಬ ಕಾರಣಕ್ಕೆ ನಾನು ಜಿ ಪಿ ಎ ಕೊಟ್ಟಿದ್ದಾರೆಂದು ಹೇಳಿಕೊಂಡು ನ್ಯಾಯಾಲಯಕ್ಕೆ ಬಂದಿರುತ್ತೇನೆಂದರೆ ಸರಿಯಲ್ಲ. ನನಗೆ ನನ್ನ ಅಳಿಯ ಮತ್ತು ಮಗಳು ಏನು ವ್ಯವಹಾರ ಮಾಡಿದ್ದಾರೆಂಬ ಬಗ್ಗೆ ನನಗೆ ಯಾವದೇ ಮಾಹಿತಿ ಇಲ್ಲ ಆ ಕಾರಣಕ್ಕೆ ನಾನು ಸಾಕ್ಷ್ಯ ಹೇಳಲು ಅರ್ಹರಲ್ಲ ಎಂದರ ಸರಿಯಲ್ಲ. ನಾವು ಹಾಗೂ ಪ್ರತಿವಾದಿ 2 ರವರು ಸೇರಿ ವಾದಿಯರಿಗೆ ಲುಕ್ಸಾನ ಉಂಟು ಮಾಡುವ ಉದ್ದೇಶದಿಂದ ಒಂದು ಖೊಟ್ಟಿ ಖರೀದಿ ಪತ್ರವನ್ನು ಸೃಷ್ಟಿ ಮಾಡಿಕೊಂಡು ಅವರ ಪರವಾಗಿ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದಿರುತ್ತೇನೆಂದರೆ ಸರಿಯಲ್ಲ. ನಾನು ಹಾಗೂ ಪ್ರತಿವಾದಿ 2 ರಿಂದ 4 ರವರು ಮಾಡಿಕೊಂಡಂತಹ ವ್ಯವಹಾರ ವಾದಿಗೆ ಗೊತ್ತಿರಲಿಲ್ಲ ಆದಕಾರಣ ಆ ವ್ಯವಹಾರ ಅವರ ಮೇಲೆ ಬಂಧನಕಾರಿ ಅಲ್ಲ ಅದು ಗೊತ್ತಾದ ನಂತರ ಅವರು ನ್ಯಾಯಾಲಯಕ್ಕೆ ಕೇಸು ದಾಖಲಿಸಿರುತ್ತಾರೆಂದರೆ ಸರಿಯಲ್ಲ. ವಾದಿಯರಿಗೆ ಸದರಿ ದಾವಾ ಆಸ್ತಿಯಲ್ಲಿ ಹಿಸ್ಸಾ ಇದೆ ಆ ಕಾರಣಕ್ಕೆ ನಾವು ಮಾಡಿಕೊಂಡ ಈ ಕಾಗದ ಪತ್ರ ಅವರ ಮೇಲೆ ಬಂಧನಕಾರಿ ಅಲ್ಲ ಎಂದರೆ ಸರಿಯಲ್ಲ. ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿ ನಾನು ಖರೀದಿ ಮಾಡಿರುವ ಕಾರಣ ನಾನು ಸದ್ಭಾವನಾ ಖರೀದಿದಾರ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ 6 ತಿಪ್ಪವ್ವ ಕಿರುತಾಳ ಇವರ ಹೆಸರು ಹಾಗೂ ಅವರ ಮಕ್ಕಳ ಹಾಗೂ ಬಸಪ್ಪನ ಮಕ್ಕಳ ಹೆಸರುಗಳು ಉತಾರನಲ್ಲಿ ಎಂಟ್ರಿ ಇರುತ್ತವೆಂದರೆ ಸಾಕ್ಷಿ ಇರಬಹುದು ಆದರೆ ನಮ್ಮ ದಾಖಲೆಯಲ್ಲಿ ಇಲ್ಲ ಎನ್ನುತ್ತಾರೆ. ಸದರಿ ಕೇಸನಲ್ಲಿ ತಕರಾರು ಸಲ್ಲಿಸಲು ಹಾಗೂ ಸಾಕ್ಷ್ಯ ಹೇಳಲು ಯಾವದೇ ಅದಿಕಾರ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.